# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ 2014-15ನೇ ಸಾಲಿನಲ್ಲಿ ಚಾಲ್ತಿಯೋಜನೆಗಳಡಿ ಎರಡನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಕೃಇ/45/ಕೃಯೋಕಾ/2014. ದಿನಾಂಕ:11-04-2014.
2. ಸರ್ಕಾರದ ಆದೇಶ ಸಂಖ್ಯೆ: FD 03 TFP 2014. ದಿನಾಂಕ: 04.04.2014.
3. ಸರ್ಕಾರದ ಆದೇಶ ಸಂಖ್ಯೆ:ಕೃಇ/48/ಕೃಯೋಕಾ/2014. ದಿನಾಂಕ:09-05-2014.
4. ಸರ್ಕಾರದ ಆದೇಶ ಸಂಖ್ಯೆ:ಕೃಇ/54/ಕೃಯೋಕಾ/2014. ದಿ:21-7-2014.
5. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಪಿಎಲ್ಎನ್/ತಾಂ-1/ಅನುದಾನಬಿಡುಗಡೆ/2014-15 ದಿನಾಂಕ:30-06-2014.

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖ (1)ರಲ್ಲಿನ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನಲ್ಲಿ ಕೃಷಿ ಇಲಾಖೆಯ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2014-15ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಉಲ್ಲೇಖ (2)ರ ಆದೇಶದನ್ವಯ ರಾಜ್ಯ ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಆಡಳಿತ ಇಲಾಖೆಯು ಮೊದಲನೇ ಕಂತನ್ನು ಬಿಡುಗಡೆ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ(3)ರ ಆದೇಶದಲ್ಲಿ ಕೃಷಿ ಇಲಾಖೆಯ 2014-15ನೇ ಸಾಲಿನಲ್ಲಿನ ಚಾಲ್ತಿಯೋಜನೆಗಳಡಿ ಮೊದಲನೇ ತ್ರೈಮಾಸಿಕ ಅನುದಾನ ರೂ.21282.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4)ರ ಪ್ರಸ್ತಾವನೆಯಲ್ಲಿ ಕೃಷಿ ಇಲಾಖೆಯ ಹಂಗಾಮು ಆಧಾರಿತ ಮೂರು ಯೋಜನೆಗಳಿಗೆ Vote on account limits(1/3 ) ಸೀಮಿತಗೊಳಿಸಿ ಒಟ್ಟು ರೂ.6221.87 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಉಲ್ಲೇಖ(5)ರ ಪತ್ರದಲ್ಲಿ 2014-15ನೇ ಸಾಲಿನಲ್ಲಿ ಚಾಲ್ತಿ ಯೋಜನೆಗಳಡಿ ಮುಂದುವರೆಸಲಾಗಿರುವ 07 ಯೋಜನಾ ಕಾರ್ಯಕ್ರಮಗಳಿಗೆ ಎರಡನೇ ತ್ರೈಮಾಸಿಕ ಅನುದಾನ ರೂ. 20866.64 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೃಷಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕೃಷಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/48/ಕೃಯೋಕಾ/2014, ಬೆಂಗಳೂರು, ದಿನಾಂಕ: 11.08.2014.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆಗಳ ರಾಜ್ಯವಲಯ ಯೋಜನೆಗಳಿಗೆ ಒಟ್ಟು **ರೂ. 14644.77 ಲಕ್ಷಗಳನ್ನು (ಹದಿನಾಲ್ಕು ಸಾವಿರದ ಆರು ನೂರಾ ನಲವತ್ತನಾಲ್ಕು ಲಕ್ಷದ ಎಪ್ಪತ್ತೇಳು ಸಾವಿರ ರೂಪಾಯಿಗಳು ಮಾತ್ರ)** ಎರಡನೇ ತ್ರೈಮಾಸಿಕಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ. 2014-15ನೇ ಸಾಲಿನ ಎರಡನೇ ತ್ರೈಮಾಸಿಕದಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆ ರಾಜ್ಯವಲಯ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ | ಯೋಜನೆ | ಲೆಕ್ಕ ಶೀರ್ಷಿಕೆ | ಒದಗಿಸಿರುವ ಆಯವ್ಯಯ | ಮೊದಲನೇ ತ್ರೈಮಾಸಿಕಕ್ಕೆ ದಿ: 09-05-2014 ರಲ್ಲಿ ಬಿಡುಗಡೆ ಯಾಗಿರುವ ಅನುದಾನ | Vote-on-Account Limit ಪ್ರಕಾರ ದಿ:21-7-2014 ರಂದು ಬಿಡುಗಡೆಗೊಳಿಸಿದ ಮೊತ್ತ | ಈಗ ಎರಡನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿದ ಅನುದಾನ |
|---|---|---|---|---|---|---|
| 1 | ಕೃಷಿ ನಿರ್ದೇಶನಾಲಯ | 2401-00-001-1-01 | 2897.50 | 724.38 | - | 724.37 |
| 2 | ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ | 2401-00-103-0-15 | 55392.41 | 13848.10 | 4616.04 | 9232.06 |
| 3 | ಸಾವಯವ ಕೃಷಿ | 2401-00-104-0-12 | 900.00 | 225.00 | - | 225.00 |
| 4 | ಬೇಸಾಯ ಸಂಬಂಧಿತ ಚಟುವಟಿಕೆಗಳು | 2401-00-109-0-21 | 9270.00 | 2317.50 | 772.50 | 1545.00 |
| 5 | ಇತರೆ ಕೃಷಿ ಯೋಜನೆಗಳು | 2401-00-800-1-40 | 20000.00 | 960.00 | - | 544.17 |
| 6 | ರಾಜ್ಯ ಯೋಜನೆಗಳು | 4401-00-001-1-01 | 2830.00 | 707.50 | - | 707.50 |
| 7 | ವಿಸ್ತೃತ ನೀರಾವರಿ ಯೋಜನೆ | 2401-00-108-1-15 | 10000.00 | 2500.00 | 833.33 | 1666.67 |
| | ಒಟ್ಟು | | **101289.91** | **21282.48** | **6221.87** | **14644.77** |

ರಾಜ್ಯವಲಯ ಯೋಜನೆಗಳಡಿ ಆಗಿಂದ್ದಾಗೆ ಹೊರಡಿಸಲಾಗುವ ಮಾರ್ಗ ಸೂಚಿಗಳನ್ನು ಅನುಸರಿಸಿ ಕೃಷಿ ಆಯುಕ್ತರು ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/03/ಟಿಎಫ್‌ಪಿ/2014, ದಿನಾಂಕ:04-04-2014ರ ಆದೇಶದಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಪ್ರತಿಯನ್ನು:-

1) ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2) ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು
6) ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
7) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
9) ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ (ಕೃಷಿ ಸೇವೆ).
10) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.

11) ಸರ್ಕಾರದ ವಿಶೇಷ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಹಾಗೂ ಕಟಾವು ತಂತ್ರಜ್ಞಾನ), ಕೃಷಿ ಇಲಾಖೆ, ಇವರ ಆಪ್ತ ಶಾಖೆ.

12) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.

13) ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.

14) ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.

15) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ಮಾಹಿತಿಗಾಗಿ ನೀಡಲಾಗಿದೆ.(ಕೃಷಿ ಆಯುಕ್ತರ ಮುಖಾಂತರ).

16) ಶಾಖಾಧಿಕಾರಿ, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.

17) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.